(*b*) ಯಾವ ಗಿಡವನ್ನಾದರೂ ಕಡಿಯಕೂಡದು, ಅಥವಾ ಯಾವ ಮರಮುಟ್ಟನ್ನು ಕತರಾಯಿಸುವದು ಅಥವಾ ಎಳೆಯುವದರಲ್ಲಿ ಅಸಡ್ಡೆಯಿಂದ ಯಾವ ನಷ್ಟವನ್ನಾದರೂ ಉಂಟುಮಾಡುವದು ಅಥವಾ ಯಾವ ಗಿಡದ್ದಾದರೂ, ಯಾವ ಪೊದೆದಾದರೂ ಚಕ್ಕೆ ಅಥವಾ ಎಲೆಗಳನ್ನು ಕಿತ್ತುಹಾಕುವದು.

(*c*) ನೀರಿಗೆ ವಿಷ ಹಾಕುವದು, ನೀರಿನಲ್ಲಿ ಡೈನಾಮಿಟ್ ಸುಡುವದು, ಅಥವಾ ಸರ್ಕಾರದಿಂದ ಆಗಿರುವ ಯಾವದಾದರೂ ನಿಬಂಧನೆಗಳಿಗೆ ವಿರೋಧವಾಗಿ ಬೇಟೆ ಆಡುವದು, ಬಂದೂಕಿನಿಂದ ಸುಡುವದು, ಮೀನು ಹಿಡಿಯುವದು, ಅಥವಾ ಬೋನುಗಳನ್ನು ಬಲೆಗಳನ್ನು ಹಾಕುವದು, ಇವುಗಳಲ್ಲಾ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಗಳಾಗಿವೆ. ಮತ್ತು ಸದರೀ ಸ್ಟೇಟ್ ಫಾರೆಸ್ಟ್ಸಿನಲ್ಲಿ ಇದರಹೀ ಕಂಡ ಕೆಲಸಗಳನ್ನು ಮಾಡುವವರು ಆರು ತಿಂಗಳ ಸಜಾ, ಅಥವಾ 500 ರೂಪಾಯಿಗಳ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಸ್ಥರಾಗಿರುತ್ತಾರೆ.

3. II. (*a*) 6ನೆ ಪ್ರಕರಣದಿಂದ ನಿರೋಧಿಸಿರುವ ಯಾವದಾದರೂ ಹೊಸ ಜಂಗಲ್ ಕತರಾವಣಿ.

(*b*) ಜಂಗಲಿಗೆ ಬೆಂಕಿ ಹಚ್ಚುವದು ಅಥವಾ ಸರ್ಕಾರದ ನಿಬಂಧನೆಗಳಿಗೆ ವಿರೋಧವಾಗಿ ಅಂಥಾ ಸ್ಟೇಟ್ ಫಾರೆಸ್ಟ್ಸಿಗೆ ಬಾಧಕ ಉಂಟಾಗುವ ಹಾಗೆ ಬೆಂಕಿಯನ್ನು ಉರಿಸುವದು, ಅಥವಾ ಅಂಥಾ ಉಂಟುಮಾಡಿದ ಉರಿಯನ್ನು ಆರಿಸದೇ ಇರುವದು.

(*c*) ಈ ಬಗ್ಯಾಗಿ ಕ್ರಮವಾಗಿ ಅಧಿಕಾರ ಹೊಂದಿದ ಫಾರೆಸ್ಟು ಆಫಿಸರು ಆಗಿಂದಾಗ್ಯೆ ಪ್ರಕಟಿಸುವ ನಿಬಂಧನೆಗಳಿಗೆ ವಿರೋಧವಾಗಿ ವಿಧಿತವಾದ ಕಾಲ ಮತ್ತು ಕ್ರಮಗಳಲ್ಲದೆ, ಬೆಂಕಿಯನ್ನು ಹಚ್ಚುವದು, ಇಡುವದು, ಮತ್ತು ತೆಗದುಕೊಂಡು ಹೋಗುವದು.

(*d*) ಯಾವ ಗಿಡವನ್ನಾಗಲಿ ಕಡಿಯುವದು, (ಕತರಾಯಿಸುವದು) ಅದರ ಮಧ್ಯ ಸುತ್ತಲೂ ಫಾಯ ಮಾಡುವದು, ಗುರ್ತು ಹಾಕುವದು, ಸವರುವದು, ತೂತು ಹಾಕುವದು, ಬೆಂಕಿಯಿಂದೆ ಅಥವಾ ಅನ್ಯಥಾ ಹಾನಿಗೊಳಿಸುವದು.

(*e*) ಬಂಡೆಯಿಂದ ಕಲ್ಲು ತೆಗೆಯುವದು, ಸುಂಣ ಅಥವಾ ಇದ್ದಲು ಸುಡುವದು, ಅಥವಾ ಯಾವ ಫಾರೆಸ್ಟ್ಸು ಉತ್ಪತ್ತಿಯನ್ನಾದರೂ ಜಮಾಯಿಸುವದು, ಯಾವದಾದರೂ ಸಾಮಾನು ತಯಾರೀ ಕೆಲಸಕ್ಕೆ ವಳಪಡಿಸುವದು, ಅಥವಾ ಸಾಗಿಸುವದು.

(*f*) ಸಾಗುವಳೀಗಾಗಲೀ, ಅಥವಾ ಇನ್ಯಾವ ಕೆಲಸಕ್ಕಾಗಲೀ ಯಾವ ಜಮೀನನ್ನಾಗಲೀ ಹಸನ ಮಾಡುವದು ಅಥವಾ ಉತ್ತುವದು.

4. ಈ ಪ್ರಸಿದ್ಧಪತ್ರಿಕೆ ಫಾಯಿಷಾಗುವ ತಾರೀಖು ಲಾಗಾಯಿತು ಮೂರು ತಿಂಗಳೊಳಗಾಗಿ ಅಂಥಾ ಸರಹದ್ದಿನೊಳಗಿರುವ ಯಾವ ಜಮೀನಿನಲ್ಲಿ ಅಥವಾ ಜಮೀನುವೇಲಾದರೂ ಅಥವಾ ಅಂಥಾ ಜಮೀನಿನ ಫಾರೆಸ್ಟ್ಸು ಉತ್ಪತ್ತಿಗಾಗಲೀ ಯಾರಿಗಾದರೂ ಹಕ್ಕು ಇದೆ ಅಥವಾ ಉಂಟು ಎಂತ ಹೇಳುವದು, ಅಂಥಾ ಪ್ರತಿ ಬಂದು ಹಕ್ಕಿನ ಸ್ವಭಾವವನ್ನು ಹಕ್ಕು ಎಷ್ಟರ ಮಟ್ಟಿಗೆ ಇದೆ ಯನ್ನತಕ್ಕಂಥಾ ವ್ಯಾಪ್ತಿಯನ್ನು ನಮೂದು ಮಾಡಿ ಬರಹ ಮೂಲಕವಾಗಲೀ, ಅಥವಾ ರೂಬರೂಬಾಗಲೀ, ತಿಳಿಯಪಡಿಸಬೇಕಲ್ಲದೆ ಹಕ್ಕುದಾರೀಗೆ ಬಲೀಯವಾದ ದಸ್ತಾವೇಜುಗಳನ್ನು ಹಾಜರ್ಮಾಡಬೇಕು.

ಎಂ. ಶಾಮರಾವ್,
ಮೈಸೂರು ಸೀಮೆಯ ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರ್.

ಮೈಸೂರು ಡಿಸ್ಟ್ರಿಕ್ಟು.

ಪ್ರ ಕ ಟ ನೆ.

ತಾರೀಖು 5ನೆ ಮಾರ್ಚಿ 1909.

ಇದರಿಂದ ಸಕಲರಿಗೂ ತಿಳಿಯಪಡಿಸುವುದೇನಂದರೆ—ಮೈಸೂರು ಡಿಸ್ಟ್ರಿಕ್ಟು ಕೃಷ್ಣರಾಜಪೇಟೆ ತಾಲ್ಲೂಕು ರೆಕಾರ್ಡಿನಲ್ಲಿ ತಹಲ್ ವರಿವಿಗೂ ಭದ್ರಪಡಿಸಿಟ್ಟಿದ್ದ 1813 ಲಾಗಾಯಿತು 1883ನೆ ಸಾಲ್ ವರಿವಿಗಿನ ಕುಳವಾರ್ ಚಿಟ್ಟಗಳನ್ನು ಈ ಲಾಗಾಯಿತು ಮೂರು ತಿಂಗಳು ಕಳೆದನಂತರ ರೂಲ್ಸು ಪ್ರಕಾರ ನಾಶಪಡಿಸಲ್ಪಡುತ್ತೆಯಾದ್ದರಿಂದ ಇವುಗಳ ಕಾಪಿಯನ್ನು ಅಪೇಕ್ಷಿಸುವವರು ಇದ್ದಾಯಿದೆ ಅಂದರ್ ಅರ್ಜಿಕೊಟ್ಟು ಕಾಪಿ ಪಡೆಯಬಹುದಾಗಿರುತ್ತೆ.

ಎಂ. ಕಾಂತರಾಜೇ ಅರಸ್,
ಡೆಪ್ಯೂಟಿ ಕಮಿಷನರ್.

1909ನೆ ಇಸವಿ ಫೆಬ್ರವರಿ ತಾರೀಖು 27ನೆ ಶನಿವಾರ ಪ್ರಾತಃಕಾಲ 8 ಘಂಟೆಯಲ್ಲಿ ರಂಗಾಚಾರ್ಲು ಯವರ ಮೆಸ್ಸೋರಿಯಲ್ ಹಾಲಿನಲ್ಲಿ ನಡೆದ ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲರುಗಳ ಆಡ್ಜರ್ನೆರಿ ಮೀಟಿಂಗಿನ ಪ್ರೊಸೀಡಿಂಗ್ಸು.

ಹಾಜರು.

1. ಮಿ॥ ಎಂ. ಕಾಂತರಾಜೇ ಅರಸನವರು (ಪ್ರೆಸಿಡೆಂಟ್).
2. ,, ಎಂ. ಜಿ. ಕೃಷ್ಣಸ್ವಾಮಿರಾಯರವರು (ವೈಸ್ ಪ್ರೆಸಿಡೆಂಟ್).
3. ,, ಬಿ. ಸುಬ್ಬರಾಯರವರು (ಮೈಸೂರು ಡಿವಿಜ್ ಎಗ್ಸಿಕ್ಯೂಟಿವ್ ಇಂಜನಿಯರ್ರವರು).
4. ,, ವಿ. ಎಲ್. ಮಾಂಕರ್ರವರು (ಮೈಸೂರು ಸಿಟಿ ಹೆಲ್ತ್ ಆಫಿಸರ್)
5. ,, ಸೈದ್ ಯಾಕೂಬ್ ಸಾಹೇಬರವರು, (ಮೈಸೂರು ತಾಲ್ಲೂಕು ಅಮಲ್ದಾರ್).
6. ,, ಎಂ. ವೆಂಕಟಕೃಷ್ಣಯ್ಯನವರು

7. ಮಿ॥ ಎಂ. ಸಿ. ರಂಗೈಯ್ಯಂಗಾರ್ಯವರು.
8. ,, ಎಂ. ನರಸುಹ್ಮಣ್ಯಸ್ವಾಮಿಗಳವರು.
9. ,, ಎ. ಸುಬ್ಬಣ್ಣನವರು.
10. ,, ಎಂ. ಕೃಷ್ಣಪ್ಪಾಜಿ ಅರಸನವರು.
11. ,, ಅಂಬಳೆ ಅಣಯ್ಯ ಪಂಡಿತರವರು.
12. ಮಿ॥ ತಿರುವೆಂಗಡ ಮೂದಲಿಯಾರ್‌ವರು.
13. ,, ಹಸೇನಲ್ಲಿಬೇಗ್ ಸಾಹೇಬರವರು.
14. ,, ರಹಿಮತ್ತುಲ್ಲಾ ಅಹಮ್ಮದ್ ಸೇಟರವರು.
15. ,, ಮಾದಪ್ಪನವರು.

ಗೈರ್ ಹಾಜರು.

1. ಮಿ॥ ಕೆ. ಚಂದ್ರಶೇಖರೈಯ್ಯನವರು.
2. ,, ಎಂ. ಅನಂತರಾಜೈಯ್ಯನವರು.
3. ಮಿ॥ ಸೈದ್ ಮೊಹದೀನ್ ಸಾಹೇಬರವರು.
4. ,, ಎಸ್. ಶ್ರೀಕಂಠೈಯ್ಯನವರು.

I. 1909ನೆ ಇಸವಿ ಜನವರಿ ಮಾಹೆಯ ಜಮಾ ಖರ್ಚು ಲೆಕ್ಕ ಆಡಿಟರವರ ರಿಪೋರ್ಟು ಮತ್ತು ಇತರ ಜನನ ಮರಣ ವಗೈರೆ ಲೆಕ್ಕಗಳು.

ಓದಿ ಪ್ಯಾಸು ಮಾಡಲಾಯಿತು.

ಕಲೆಕ್ಷನ್ ವಿಷಯದಲ್ಲಿ ಆಡಿಟರವರ ರಿಪೋರ್ಟಿನಲ್ಲಿ ಮಾಡಿರುವ ಸಲಹೆಗಳನ್ನು ಅನುಮೋದಿಸಿ ಕೂಡಲೆ ಜಾರೀಲಿ ತರಬೇಕೆಂತಲೂ ಇಂಪೈಸ್ಟ್‌ನಿಂದ ಕೊಟ್ಟಿರತಕ್ಕ ಬಾಕಿ ದಿವಸಗಳಿಂದ ಬಾಕಿ ಇರುವ ಅಡ್ವಾನ್ಸು ವೊಬಲಗನ್ನು ಜಾಗ್ರತೆಯಾಗಿ ಅಡ್ಜಸ್ಟು ಮಾಡಲು ವೈಸ್ ಪ್ರೆಸಿಡೆಂಟರವರು ತಕ್ಕ ವಿವರ್ಾಡು ಮಾಡಬೇಕೆಂತಲೂ ಸಹ ತೀರ್ಮಾನಿಸಿದೆ.

II. ಮ್ಯಾನೇಜಿಂಗ್ ಕಮಿಟಿ ಪ್ರೊಸೀಡಿಂಗ್ಸು.

ಖಾಯಂ ಮಾಡಿದೆ.

III. ಅಪಾಥಿಕೆರಿ ಎಸ್. ವೆಂಕೋಬರಾಯರನ್ನು ಕರ್ನಾಟಕ ವೈದ್ಯಶಾಲೆಯ ಚಾರ್ಜಿನಲ್ಲಿಡತಕ್ಕ ವಿಷಯದಲ್ಲಿ ಸಿವಿಲ್ ಸರ್ಜರವರ ಪ್ರಪೋಜಲ್

ಮುಂದಿನ ಮೀಟಿಂಗಿಗೆ ಅಡ್ಜರ್ಡ್ ಮಾಡಿದೆ.

ಪ್ರಾಪೋಜರ್ಷನ್ನು ತಪ್ಪಿಸಲು ತೀರಿಸತಕ್ಕ ಬಗ್ಗೆ ಸಿವಿಲ್ ಸರ್ಜರವರನ್ನು ಮೀಟಿಂಗಿಗೆ ದಯಮಾಡಬೇಕೆಂದು ಕೇಳಬೇಕು.

IV. ಮೈಸೂರು ಸಿಟಿ ಇಂಪ್ರೂವ್‌ಮೆಂಟು ಡಿವಿಜರ್ ಎಗ್ಸಿಕ್ಯೂಟಿವ್ ಇಂಜನಿಯರು ಹಾಸ್ ಕನೆಕ್ಷನ್‌ಗಳಿಗೋಸ್ಕರ ತಯಾರ್ಮಾಡಿರುವ ಟೈಪ್ ಪ್ಲಾನ್ ಮೇಲೆ ಮ್ಯಾನೇಜಿಂಗ್ ಕಮಿಟಿಯವರು ಮಾಡಿರುವ ಶಿಪಾರಸ್ಸು.

ಬದಲಾವಣೆ ಮಾಡಿರುವ ಪ್ರಕಾರ ಟೈಪ್ ಪ್ಲಾನ್ನು ಅನುಮೋದಿಸತಕ್ಕದ್ದೆಂದು ತೀರ್ಮಾನಿಸಿದೆ.

V. ಪೂರ್ವದಲ್ಲಿ ಶಿಪಾರಸ್ಸು ಮಾಡಿದ್ದ ಪ್ರಕಾರ, ಕರ್ನಾಟಕ ವೈದ್ಯಶಾಲೆಯ ಕಾಂಪೌಂಡರ್ ವಿಶ್ವನಾಥೈಯ್ಯನವರಿಗೆ 5 ರೂಪಾಯಿ ತಲಬು ಇಜಾಫೆ ಮಾಡತಕ್ಕ ವಿಷಯದಲ್ಲಿ ಮ್ಯಾನೇಜಿಂಗ್ ಕಮಿಟಿಯವರ ಶಿಪಾರಸ್ಸು.

ಮ್ಯಾನೇಜಿಂಗ್ ಕಮಿಟಿಯವರ ಶಿಪಾರಸ್ಸನ್ನು ಅನುಮೋದಿಸತಕ್ಕದ್ದೆಂದು ತೀರ್ಮಾನಿಸಿದೆ.

VI. ಇತರಪರ ಪಯಾಲ್ ಸ್ಕೂಲುಗಳಿಗೆ ಪರೀಕ್ಷಾ ಫಲಿತಾಂಶದ ಮೇಲೆ ಗ್ರಾಂಟು ಪಾವತಿ ಮಾಡಬೇಕೆಂಬ ವಿಷಯದಲ್ಲಿ ಮ್ಯಾನೇಜಿಂಗ್ ಕಮಿಟಿಯವರ ಶಿಪಾರಸ್ಸು.

ಬಿಪ್ಪಿದ.

VII. ಮೈಸೂರು ಬಕ್ಷಿ ನರಸಪ್ಪನವರ ಅಗ್ರಹಾರದಲ್ಲಿ ವೆಂಕಣ್ಣಾಚಾರ್ಯರೆಂಬುವರು ಅಕ್ರಮವಾಗಿ ಮನೆಯನ್ನು ಸ್ವಾಧೀನಕ್ಕೆ ತೆಗೆದುಕೊಂಡಿರುವ ಭಾಗದಲ್ಲಿ ಅವರ ಮೇಲೆ ದಾವಾ ಮಾಡತಕ್ಕ ವಿಷಯದಲ್ಲಿ ಮ್ಯುನಿಸಿಪಲ್ ಕೌನ್ಸಿಲ್ಲಿನವರ ಅಭಿಪ್ರಾಯವನ್ನು ತೆಗೆದು ರಿಕಾರ್ಡು ಮಾಡಬೇಕೆಂದು ಗೌರ್ನಮೆಂಟಿನಿಂದ ಸಾದರಾಗಿರುವ ಕಳೆದ ಜನವರಿ 18ನೆ ನಂಬರ್ 6696-7—Mi. 155-07— ನೆ ನಂಬರ್ ಪ್ರೊಸೀಡಿಂಗ್ಸು

ಅಭಿಪ್ರಾಯ ಮತ್ತು ಅಡ್ವೈಸ್ ಬಗ್ಗೆ ನಡವಳಿಕೆ ಕಟ್ಟನ್ನು ಮಿ॥ ಎಂ. ಸಿ. ರಂಗೈಯ್ಯಂಗಾರ್ಯವರಿಗೆ ರಿಫರ್ ಮಾಡಬೇಕೆಂದು ತೀರ್ಮಾನಿಸಿದೆ.

VIII. ಅಕ್ತಿಮಿಷ್ಟ ಇಡುವದಕ್ಕೋಸ್ಕರ ನೆಪ ಮಾತ್ರ ಕ್ರಯಕ್ಕೆ ಬಕ್ಷಿ ಜೀವಣರಾಯರ ಕಟ್ಟೆ ವಳಾಯವನ್ನು ಕೊಡಿಸಬೇಕೆಂದು ರಿಟೈರ್ಡ್ ಅಸಿಸ್ಟಂಟು ಕಮಿಷನರ್ ಮಿ॥ ಕೆ. ಶ್ರೀಕಂಠೈಯ್ಯನವರು ಕೊಟ್ಟಿರುವ ಅಪ್ಲಿಕೇಷನ್ನಿಗೆ ಕೌನ್ಸಿಲಿನವರ ಅಭಿಪ್ರಾಯದ ಬಗ್ಗೆ ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡು ಛೇರ್ಮರವರಿಂದ ತಲಪಿರುವ 1—2—09ನೆ ಮಕ್ರುಂ 100ನೆ ನಂಬರ್ ಲೆಟರ್.

ಅವಶ್ಯಕವಾದ ಷರತ್ತುಗಳಿಗೆ ಬಳಪಡಿಸಿ ಪ್ಲಾನಿನಲ್ಲಿ ನಮೂದು ಮಾಡಿರುವಂತೆ ದಕ್ಷಿಣ ಭಾಗದಲ್ಲಿ ಹಳ್ಳದವರಿಗೆ ಜಾಗ ಕೊಡಲು ಮ್ಯುನಿಸಿಪಲ್ ಕೌನ್ಸಿಲ್ಲಿನವರ ಅಕ್ಷೇಪಣೆ ಇಲ್ಲವೆಂದು ತೀರ್ಮಾನಿಸಿದೆ.

ಕಟ್ಟಡದ ತಪ್ಪುಗಲು ಪ್ಲಾನನ್ನು ಟ್ರಸ್ಟ್ ಬೋರ್ಡಿಗೆ ಹಾಜರು ಮಾಡುವಂತೆ ಮಿ॥ ಶ್ರೀಕಂಠೈಯ್ಯನವರನ್ನು ಕೇಳಬೇಕು.

IX. ಮಾಹೆಯಾನಾ 20 ರೂಪಾಯಿಗಿಂತ ಜಾಸ್ತಿಯಾಗದ ತಲಬು ಇರತಕ್ಕ ಎಲ್ಲಾ ನೌಕರಮನೇರಿಗೂ ಗೌರ್ನಮೆಂಟಿನಿಂದ ಮಂಜೂರಾಗಿರುವ ಗ್ರೇಡ್ ಕಂಪಸ್ಯೇಷನ್ ಅಲೋಯರ್ಯನ್ಸಿಯಾನೆ ವುಂಗೈ ಭತ್ಯವನ್ನು ಚಾಲ್ತಿ ಸಾಲ್ ಬಜ್ಜಟ್ಟಿನಲ್ಲಿ ಯಾವ ಬಾಬಿಗೆ ಭಾರ್ಜು ಮಾಡತಕ್ಕದ್ದೆಂಬುವದನ್ನು ರಿಪೋರ್ಟು ಮಾಡಬೇಕೆಂದು ಮೈಸೂರು ಗೌರ್ನಮೆಂಟು ರೆವಿನ್ಯೂ ಮತ್ತು ಜನರಲ್ ಡಿಪಾರ್ಟುಮೆಂಟುಗಳ ಸೆಕ್ರಿಟರಿಯವರಿಂದ ತಲಪಿರುವ 1—2—1909ನೆ ಮಕ್ರುಂ 7148-57—Mi. 215-08-11ನೆ ನಂಬರ್ ಡಾಕೆಟ್.

ಈ ಅಲೋಯರ್ಯನ್ಸನ್ನು ಯಾವ ಬಾಬಿನಿಂದ ಕೊಡತಕ್ಕದ್ದೆಂಬುವದನ್ನು ವೈಸ್ ಪ್ರೆಸಿಡೆಂಟರವರು ತೋರಿಸಬೇಕೆಂದು ತೀರ್ಮಾನಿಸಿದೆ.

X. ಮೈಸೂರು ಸಿಟಿ ವಾಟರ್ ವರ್ಕ್ಸ್ ಪಂಪಿಂಗ್ ಪ್ಲಾಂಟ್ ಎಲೆಕ್ಟ್ರಿಫಿಕೇಷನ್‌ಗೆ ಬೇಕಾಗಿರುವ ಅಂದಾಜಾ ವೊಬಲಗು ಪೂರ್ತಾ 50,000 ರೂಪಾಯಿಗಳನ್ನು ಶೇಕಡಾ ಸಾಲೀಯಾನಾ 3 ರೂಪಾಯಿ ಬಡ್ಡಿಯಂತೆ ಮ್ಯುನಿಸಿಪಲ್ ಕೌನ್ಸಿಲಿನವರಿಗೆ ಸಾಲವಾಗಿ ಕೊಟ್ಟಿರುವದಾಗಿಯೂ ಸದರೀ ಸಾಲವನ್ನು ತೀರಿಸಲು ಉತ್ಪತ್ತಿಯ ಸೈಕಿ ಯಾವ ಬಾಬನ್ನು ಈಡುಮಾಡುತ್ತೆಂಬುವದನ್ನು ಮತ್ತು ಸದರೀ ಸಾಲವನ್ನು ತೀರಿಸತಕ್ಕ ಕಾಲವನ್ನು ಸಹ ರಿಪೋರ್ಟು ಮಾಡಬೇಕೆಂದು ಗವರ್ನಮೆಂಟಿನಿಂದ ಸಾದರಾಗಿರುವ 3—2—09ನೆ ಮಕ್ರುಂ 3865-5—ಮ್ಯೂನಿ. 421-07ನೆ ನಂಬರ್ ಪ್ರೊಸೀಡಿಂಗ್ಸು.

ಈ ಕೆಳಗೆ ಕಂಡ ದೊಡ್ಡವನುಷ್ಯರುಗಳ ಸಬ್ ಕಮಿಟಿಗೆ ಬಹಳ ಜಾಗ್ರತೆಯಾಗಿ ರಿಪೋರ್ಟು ಮಾಡತಕ್ಕ ಬಗ್ಗೆ ಈ ವಿಷಯವನ್ನು ರಿಫರ್ ಮಾಡತಕ್ಕದ್ದೆಂದು ತೀರ್ಮಾನಿಸಿದೆ.

ವೈಸ್ ಪ್ರೆಸಿಡೆಂಟರವರು. | ಎಗ್ಸಿಕ್ಯೂಟಿವ್ ಇಂಜನಿಯರವರು.

ಮಿ॥ ಎಂ. ಸಿ. ರಂಗೈಯ್ಯಂಗಾರ್ಯವರು. | ಮಿ॥ ಅಂಣಯ್ಯಪಂಡಿತರವರು. | ಮಿ॥ ವೆಂಕಟಕೃಷ್ಣಯ್ಯನವರು.

XI. ಮೈಸೂರು ಪಟ್ಟಣದಲ್ಲಿ ಹೌಸ್ ಕನೆಕ್ಷನ್ ರಿಪೇರಿ ವಿಷಯದಲ್ಲಿ ವಾಟರ್‌ಸಪ್ಲೈ ಮತ್ತು ಸ್ಯೂವರ್ಸ್ ಡಿವೀಜ್ ಎಗ್ಜಿಕ್ಯುಟಿವ್ ಇಂಜನಿಯರವರು ತಯಾರು ಮಾಡಿರುವ ರೂಲ್ಸುಮೇಲೆ ಮ್ಯಾನೇಜಿಂಗ್ ಕಮಿಟಿಯವರು ಮಾಡಿರುವ ತಿದ್ದುಪಾಟುಗಳು.

ಒಪ್ಪಿದೆ.

XII. ಪಟ್ಟಣದಲ್ಲಿರತಕ್ಕ ಪೈಪುಗಳು ಮತ್ತು ಟ್ಯಾಪುಗಳ ರಿಪೇರಿ ವಿಷಯದಲ್ಲಿ (ಚೀಫ್ ಇಂಜನಿಯರರವರ ಅನುಮತಿಯಿಂದ) ಬೋರ್ಡಿನವರ ಅಭಿಪ್ರಾಯವನ್ನು ತಿಳಿಸಬೇಕೆಂದು 1908ನೆ ಇಸವಿ ದಸರಾ 412ನೆ ನಂಬರ್ ಸಬ್ಜಕ್ಟ್ ಕಾಯಿನಿಸಿ ಗೌರ್ನಮೆಂಟು ಸೆಕ್ರಟೆರಿಯವರಿಂದ ತಲಪಿರುವ 5—2—09ನೆ ಮರ್ಕುಂ 7338-9—Ml. 304-08—2ನೆ ನಂಬರ್ ಡಾಕೆಟ್.

ಮ್ಯೂನಿಸಿಪಾಲಿಟಿಯಿಂದ ಲೈಸೆನ್ಸು ಪಡೆದ ಪ್ಲಂಬರ್‌ಗಳಿಂದ ಪೈಪು ಮತ್ತು ಟ್ಯಾಪುಗಳಿಗೆ ಅವಶ್ಯಕವಾದ ರಿಪೇರಿಗಳನ್ನು ಮನೆ ಮಾಲೀಕರು ಮಾಡಿಸಿಕೊಳ್ಳಲು ಅಪ್ಪಣೆ ಕೊಡಬಹುದೆಂದು ತೀರ್ಮಾನಿಸಿದೆ.

XIII. ಬಜ್ಜಟ್ ಗ್ರಾಂಟುಗಳ ರಿ ಅಪ್ರೋಪ್ರಿಯೇಷನ್ ಸ್ಟೇಟ್‌ಮೆಂಟ್.

ಒಪ್ಪಿದೆ.

XIV. ಈ ಪಟ್ಟಣದ ನಾಮಿನೇಟೆಡ್ ಮತ್ತು ಎಲೆಕ್ಟೆಡ್ ಮ್ಯೂನಿಸಿಪಲ್ ಕೌನ್ಸಿಲರುಗಳು 1909ನೆ ಜೂನ್ ಆಖೈರು ವರಿಗೆ ಇರುವಂತೆಯೇ ಇರತಕ್ಕದ್ದೆಂದು ಗೌರ್ನಮೆಂಟಿನಿಂದ ಸಾದರಾಗಿರುವ 3—2—09ನೆ ಮರ್ಕುಂ 7234ನೆ ನಂಬರ್ ನೋಟಿಫಿಕೇಷನ್.

ರಿಕಾರ್ಡು ಮಾಡಿದೆ.

XV. ಮೈಸೂರು ಪಟ್ಟಣದಲ್ಲಿ ಶಿಡುಬು ಹಾಕತಕ್ಕದ್ದಕ್ಕೆ ಒಂದು ತಿಂಗಳು ಪರಿಯಂತರ 4 ಜನ ವ್ಯಾಕ್ಸಿನೇಟರುಗಳನ್ನು ನಿಯಾಮಕ ಮಾಡಿಕೊಳ್ಳಬೇಕೆಂದು ಹೆಲ್ತ್ ಆಫಿಸರವರು ಮಾಡಿರುವ ಪ್ರಪೋಜಲ್.

ಈ ಹಂಗಾಮಿ ವ್ಯಾಕ್ಸಿನೇಟರುಗಳನ್ನು ಪ್ರೆಸಿಡೆಂಟರವರು ಸ್ಯಾಂಕ್ಷನ್ ಮಾಡಿರುವ ಪ್ರಕಾರ ಒಪ್ಪಿದೆ ಮತ್ತು ಅವಶ್ಯವಾದಲ್ಲಿ ಇವರುಗಳನ್ನು ಇನ್ನು ಹೆಚ್ಚುಕಾಲ ಇಟ್ಟುಕೊಳ್ಳಬಹುದೆಂಬುವದನ್ನು ಪ್ರೆಸಿಡೆಂಟರವರ ಆಲೋಚನೆಗೆ ಬಿಟ್ಟು ಇದೆ ಎಂದು ತೀರ್ಮಾನಿಸಿದೆ.

XVI. ಪಟ್ಟಣದಲ್ಲಿ ಹೌಸ್ ಕನೆಕ್ಷನ್‌ಗಳಿಗೆ ವಾಟರ್ ಮೀಟರ್ ಇಡುವ ವಿಷಯದಲ್ಲಿ ಮ್ಯಾನೇಜಿಂಗ್ ಕಮಿಟಿಯವರ ಶಿಫಾರಸು ಮತ್ತು ಇದಕ್ಕೆ ಸಂಬಂಧಪಟ್ಟ ನಡವಳಿಕೆ.

ಮ್ಯಾನೇಜಿಂಗ್ ಕಮಿಟಿಯವರ ಶಿಫಾರಸನ್ನು ಒಪ್ಪಿದೆ ಎಂದು ತೀರ್ಮಾನಿಸಿದೆ.

XVII. ಸ್ಯಾನಿಟೆರಿ ವಿಷಯಗಳಲ್ಲಿ ಹೆಲ್ತ್ ಆಫಿಸರವರು ವೈಸ್ ಪ್ರೆಸಿಡೆಂಟರಾಗಿ ಏನೇನು ಕೆಲಸ ಮಾಡಬೇಕೆಂತಲೂ ಮತ್ತು 12—1—09ನೆ ಮರ್ಕುಂ 6485-6—ಮ್ಯೂ. 127-07ನೆ ನಂಬರು ಗವರ್ನಮೆಂಟ್ ಪ್ರೊಸೀಡಿಂಗ್ಸು 4 ಮತ್ತು 5ನೆ ಪ್ಯಾರಾಗಳ ಪ್ರಕಾರ ಪಬ್ಲಿಕ್ ಹೆಲ್ತ್‌ಗೋಸ್ಕರ ಫಂಡ್ಸು ಗೊತ್ತುಮಾಡಬೇಕೆಂತಲೂ ಹೆಲ್ತ್ ಆಫಿಸರವರಿಂದ ತಲಪಿರುವ 13-2-09ನೆ ಮರ್ಕುಂ 1604ನೆ ನಂಬರ್ ಡಾಕೆಟ್.

ವಾಪಸು ತೆಗೆದುಕೊಂಡಿದಾರೆ.

XVIII. ಚಾಮರಾಜ ಮೊಹಲ್ಲಾದಲ್ಲಿ ಮಿ॥ ಅಂಬಳೆ ಅಂಣಯ್ಯಪಂಡಿತರವರ ಮನೆಗೆ ಪಶ್ಚಿಮ ಭಾಗದಲ್ಲಿರುವ ಖಾಲೀ ಜಾಗವನ್ನು ತೋಳಸೀತೋಟಕ್ಕೆ ಕೊಡಿಸಬೇಕೆಂದು ಮೈಸೂರು ಅರಮನೆ ಅಂಬಾವಿಳಾಸ ಪೊಖ್ತೇಸರ್ ಮಿ॥ ವೆಂಕಟರಮಣಯ್ಯನವರು ಕೊಟ್ಟಿರುವ ಅಪ್ಲಿಕೇಷನ್.

ಚರ್ಚಾಸ್ಪದವಾದ ಖಾಲೀ ಜಾಗವನ್ನು ಖಂಡಿತವಾದ 'ಪರತ್ತುಗಳಮೇಲೆ ದರಖಾಸ್ತುದಾರರಿಗೆ ಕೊಡತಕ್ಕದ್ದೆಂದು ತೀರ್ಮಾನಿಸಿದೆ.

ಎಂ. ಕಾಂತರಾಜ ಅರಸ್, ಪ್ರೆಸಿಡೆಂಟ್.

ಮೈಸೂರು ಸಿಟಿ ಮ್ಯೂನಿಸಿಪಲ್ ಕೌನ್ಸಿಲರವರ ಆಫೀಸಿಗೆ.

ಮ್ಯೂನಿಸಿಪಲ್ ಆಡಿಟರ ರಿಪೋರ್ಟು.

ತಾರೀಖು 20ನೆ ಫೆಬ್ರವರಿ 1909.

ಈ ತಿಂಗಳು 19—2—09ರಲ್ಲಿ ಜನವರಿ ಮಾಹೆ ಲೆಕ್ಕಗಳನ್ನು ಮತ್ತು ವೌಚರು ರಸೀತಿ ವಗೈರೆಯನ್ನು ಆಡಿಟ್ ಮಾಡಲಾಯಿತು.

1. ಮೊಹತರ್ಫಾ ವಗೈರೆ ಜನವರಿ ಮಾಹೆಯಲ್ಲಿ ಎಲ್ಲಾ ಮೊಹಲ್ಲಾದಿಂದ ಸುಮಾರು 1,400 ರೂಪಾಯಿಗಳು ವಸೂಲಾಗಿರುತ್ತೆ. ಇದು ಕ್ರಮವಾಗಿ ನಡೆಯಬೇಕೆಂದು ಪ್ರತಿ ವಸೂಲಿ ಮುತ್ಸದ್ದಿಗಳಿಗೂ ಜವಾನರನ್ನು ಕೊಟ್ಟಿರುತ್ತೆ. ಹೀಗಿರುವಲ್ಲಿ ಮೇಲ್ಕಂಡ ಮೊಬಲಗು ವಸೂಲಿ ಇದರ ಸಿಬ್ಬಂದಿ ಸುಮಾರು 375 ರೂಪಾಯಿ ಆಗುತ್ತೆ. ಇದರಿಂದ ವಸೂಲಿ ವಿಷಯ ತೃಪ್ತಿಕರವಾಗಿ ಕೆಲಸ ನಡೆಯುವದಿಲ್ಲಾ. ದುಬಾರಿ ಸಿಬ್ಬಂದಿ ಖರ್ಚು ಆಗುತ್ತಾ ಇದೆ.

2. ಆಫೀಸಿನಲ್ಲಿ ಎಲ್ಲಾ ಮೊಹಲ್ಲಾ ಜನರಲ್ ಖಾತೆ ಇಡಿಸಿ ಆಯಾಯ ದಿವಸ ವಸೂಲಾದ ಮೊಬಲಗನ್ನು ಆಯಾಯ ದಿವಸ ವಸೂಲಿ ಮುತ್ಸದ್ದಿರವರು ದಾಖಲು ಮಾಡಬೇಕು. ಇದನ್ನು ಕಲೆಕ್ಟರು ಸರಿಯಾದ ಚಕ್ಕು ಮಾಡಬೇಕು.

3. ವಸೂಲಿ ಮುತ್ಸದ್ದೀರವರಲ್ಲಿ ಖಾತೆ ಮತ್ತು ಖಿರದಿ ಪುಸ್ತಕಗಳನ್ನು ಕೊಡುವದಕ್ಕೆ ಬದಲಾಗಿ ಬಿಲ್ಲುಗಳನ್ನು ಕೊಟ್ಟು ವಸೂಲಿ ಕ್ರಮ ನಡೆಸಿ ಚಕ್ಕು ಸರಿಯಾಗಿ ಮಾಡಿದರೆ ವಸೂಲಾತಿ ಸರಿಯಾಗಿ ನಡೆಯುತ್ತೆ.

4. ಈಗ ಹಾಲಿ ಮುತ್ಸದ್ದೀರವರಲ್ಲಿ ಇರುವ ಖಾತೆ ಮತ್ತು ಖಿರದಿ ಪುಸ್ತಕಗಳು ಪ್ರಿಂಟೆಡ್ ನಂಬರಿನಲ್ಲಿ ಇಲ್ಲಾ ಮತ್ತು ಬಹಳವಾಗಿ ಚಿತ್ತು ವಗೈರೆ ಇರುತ್ತೆ ಮತ್ತು ಲೆಖ್ಕಾ ಸಮೇತಾಯಿಷಿ ಸಹ ಆಗುವದು ಕಷ್ಟವಾಗಿರುತ್ತೆ. ಇದನ್ನು ಸರಿಯಾಗಿ ಕ್ರಮಪಡಿಸಬೇಕು.

5. ಇಂಪ್ರೆಸ್ಟು ಮೊಬಲಗು ಈ ಕೆಳಗೆ ನಮೂದು ಮಾಡಿರುವವರಿಂದ ಬಹುಕಾಲದಿಂದ ಯಾತಕ್ಕೆ ವಸೂಲಾಗಿಲ್ಲಾ. ಡಾ॥ ಸಾಹೇಬರವರಿಂದ ರೂ. 69, ಎ. ಕೆ. ಸ್ವಾಮಿ ರೂ. 10, ಕೇಶವದಾರ್ರು ರೂ. 3, ಪಬ್ಲಿಕ್ ಪ್ರಾಸಿಕ್ಯೂಟರು ರೂ. 69—8—6, ಕಲೆಕ್ಟರು ರೂ. 10, ಕಂಠೀರವಾಚಾರ್ರು ರೂ. 5.

(ಸೈ॥ ಡಿ) ಎಸ್. ಶ್ರೀಕಂಠಯ್ಯ.
(ಸೈ॥ ಡಿ) ಕೃಷ್ಣಪ್ಪಾಜಿ. ಅರಸ್.